## ಅಳಿವಿನಂಚಿನಲ್ಲಿ ಮೂಗುತಿ ಅಣಬೆ

ಸಣ್ಣ ಗಾತ್ರದ ಮೂಗುತಿ ಅಣಬೆ ಹಲವಾರು ಕಾಯಿಲೆಗಳಿಗೆ ರಾಮಬಾಣ. ಮೈಕೈ ನೋವಿಗೆ ಇದರ ಪದಾರ್ಥ ಹೇಳಿ ಮಾಡಿಸಿದ ಮದ್ದು. ಭೂಮಿಗೆ ರಾಸಾಯನಿಕದ ಬಳಕೆಯಾದಂತೆ ಮೂಗುತಿ ಅಣಬೆ ಕಣ್ಮರೆಯಾಗತೊಡಗಿತು. ಇದೀಗ ಅಪ್ಪಟ ಸಾವಯವದ ನೆಲದಲ್ಲಿ ಅಪರೂಪಕ್ಕೊಮ್ಮೆ ಮಾತ್ರ ಈ ಅಣಬೆ ಕಾಣಸಿಗುತ್ತದೆ. ಇತರ ಅಣಬೆಗಳಂತೆ ಇದನ್ನು ಬಿತ್ತಿ ಬೆಳೆಸಲು ಸಾಧ್ಯವಿಲ್ಲ.

-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ





## ಕಲ್ಲು ಸಬ್ಬಸಿಗೆ

ಸಂತೆಯಲ್ಲಿ ದೊರೆಯುವ ಸಬ್ಬಸಿಗೆ ಸೊಪ್ಪಿನ ರುಚಿಗೆ ಮನಸೋತರೂ ಅದರ ಘಾಟು ವಾಸನೆಗೆ ದೂರ ಸರಿಯುವವರೇ ಹೆಚ್ಚು. ಆದರೆ ಈ ಸಬ್ಬಸಿಗೆಗಿಂತ ಹೆಚ್ಚು ಘಾಟು ವಾಸನೆ ಬೀರುವ ಕಲ್ಲು ಸಬ್ಬಸಿಗೆ ಒಂದಿದೆ. ಇದು ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತದೆ.

ಕಲ್ಲುಗುಡ್ಡಗಳಲ್ಲಿ ಬೆಳೆಯುವುದರಿಂದ ಈ ಸಬ್ಬಸಿಗೆ ಸಸ್ಯಕ್ಕೆ ಕಲ್ಲು ಸಬ್ಬಸಿಗೆ ಎಂದು ಹೆಸರು ಬಂದಿರಬಹುದು. ಮುಂಗಾರಿನ ಮೊದಲ ಮಳೆಗೆ ಕಲ್ಲಿನ ಗುಡ್ಡಗಳಲ್ಲಿ ಈ ಕಿರು ಸಸ್ಯ ಬೆಳೆಯುತ್ತದೆ. ನೆಲಕ್ಕೆ ಹರಡಿದಂತೆ ಬೆಳೆಯುವ ಈ ಕಲ್ಲು ಸಬ್ಬಸಿಗೆ ಅತ್ಯಂತ ಘಾಟು ವಾಸನೆ ಹೊಂದಿರುತ್ತದೆ. ಆದರೆ ತಿನ್ನಲು ಅಷ್ಟೇ ರುಚಿಯಾಗಿರುತ್ತದೆ. ಕಲ್ಲು ಸಬ್ಬಸಿಗೆ ಉದರ ತೊಂದರೆಗಳಾದ ಅಜೀರ್ಣ, ಅ್ಯಸಿಡಿಟಿ, ಮಲಬದ್ಧತೆಯನ್ನು ನಿವಾರಿಸುತ್ತದೆ. ವಾತ ರೋಗವನ್ನು ನಿಯಂತ್ರಿಸುವ ಕಲ್ಲು ಸಬ್ಬಸಿಗೆ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಕಲ್ಲು ಸಬ್ಬಸಿಗೆ ಸೇವಿಸುವುದರಿಂದ ಹೊಟ್ಟೆಯಲ್ಲಿನ ಕಲ್ಲುಗಳು ಕರಗುತ್ತವೆ. ಹೀಗಾಗಿ ವರ್ಷಕ್ಕೆ ಒಂದು ಸಾರಿಯಾದರೂ ಕಲ್ಲು ಸಬ್ಬಸಿಗೆಯನ್ನು ಸೇವಿಸಬೇಕು ಎನ್ನುವುದು ಇಲ್ಲಿನ ಜನಸಾಮಾನ್ಯರ ನಂಬಿಕೆ. ಸಂತೆಯಲ್ಲಿ ಕಲ್ಲು ಸಬ್ಬಸಿಗೆ ಸಿಗುವುದಿಲ್ಲವಾದ್ದರಿಂದ ಇದನ್ನು ತಿನ್ನಬೇಕೆಂದರೆ ಸಮೀಪದ ಗುಡ್ಡ ಏರಬೇಕು. ಇಲ್ಲವೇ ದನ, ಕುರಿ ಕಾಯುವವರಿಗೆ ದುಂಬಾಲು ಬೀಳಬೇಕು. ಕಲ್ಲು ಸಬ್ಬಸಿಗೆಯ ಪಲ್ಯ, ಚಟ್ನಿ ಘಾಟು ವಾಸನೆಯಿಂದ ಕೂಡಿರುತ್ತಾದರೂ ಅತ್ಯಂತ ರುಚಿಕರ.

ಚಿತ್ರ- ಬರಹ:
ಸುರೇಶ ವಗ್ಗಾ, ಗುಳೇದಗುಡ್ಡ

## ಅಮ್ಮನ ಘಟ್ಟದ ಜೇನುಕಲ್ಲಮ್ಮ

ಈ ಪ್ರಕೃತಿಯಲ್ಲಿ ದೇವಿ ಎಲ್ಲೆಲ್ಲಿ ಯಾವ ರೂಪದಲ್ಲಿ ದರ್ಶನ ನೀಡುತ್ತಾಳೆ ಎಂದು ಹೇಳಲಾಗದು. ಇದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಜೇನುಕಲ್ಲಮ್ಮನ ದೇವಸ್ಥಾನ. ಈ ತಾಯಿ ಕಡಿದಾದ ಬಂಡೆಗಳ ನಡುವೆ, ಹೆಜ್ಜೇನು ಗೂಡುಗಳ ನೈಸರ್ಗಿಕ ತೋರಣದಲ್ಲಿ ಅಲಂಕೃತಳಾಗಿ ವಿರಾಜಮಾನಳಾಗಿದ್ದಾಳೆ. ಅದಕ್ಕೆ ಆಕೆ ಭಕ್ತರು ಪ್ರೀತಿಯಿಂದ 'ಅಮ್ಮನ ಘಟ್ಟದ ಜೇನುಕಲ್ಲಮ್ಮ' ಎಂದು ಕರೆಯುತ್ತಾರೆ. ಪ್ರತಿ ವರ್ಷ ಭಾದ್ರಪದ ಮಾಸದಲ್ಲಿ ನಡೆಯುವ ಜೇನುಕಲ್ಲಮ್ಮನ ಜಾತ್ರೆ ನೋಡಲು ಎರಡು ಕಣ್ಣುಗಳು ಸಾಲವು. ದೇವರ ಆರಾಧನೆಗಾಗಿ ಗುಡಿ ಗೋಪುರಗಳನ್ನು ಕಟ್ಟಬೇಕಿಲ್ಲ. ಪ್ರಕೃತಿಯ ಆರಾಧನೆಯೇ ದೇವಿಯ ಆರಾಧನೆ.

-ಉಮಾ ಶಿವಶಂಕರ್, ಶಿವಮೊಗ್ಗ

